ಕಳಪೆ ಹತ್ತಿ ಮಾದರಿ ಬೀಜಗಳನ್ನು ಜಪ್ತಿ ಮಾಡಿ ಅದನ್ನು ಕೃಷಿ ಸಂಶೋದನಾಲಯಗಳಿಗೆ ಬೀಜ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ.

೩) ೨೬ ಮಂದಿ ನೋಂದಾಯಿಸಿದ ಬೀಜ ವ್ಯಾಪಾರಿಗಾರರ ಮೇಲೆ ೧೯೮೮-೮೯ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಶ್ರೀಗಂಧದ ಕಟ್ಟಿಗೆ ಕಳ್ಳ ಸಾಗಾಣಿಕೆ ಬಗ್ಗೆ

೧೪೬೦ (೩೦೭೯) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿನಿತ್ಯವು ನೂರಾರು ಟನ್ ಗಂಧದ ಕಟ್ಟಿಗೆ ಕಳ್ಳ ಸಾಗಾಣಿಕೆಯಿಂದ ಹೊರ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ)- ಇದನ್ನು ತಡೆಗಟ್ಟಲು ಇಲಾಖೆಯವರು ವೈಜ್ಞಾನಿಕವಾಗಿಯೇನಾದರೂ ಪ್ರಯತ್ನಿಸಿರುವರೆ?

ಇ) ಹಾಗಿದ್ದಲ್ಲಿ ಕೈಗೊಳ್ಳಲಿರುವ ನೂತನ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಿಂದ ಗಂಧ ಕಳ್ಳ ಸಾಗಾಣಿಕೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಬಹುಪಾಟ್ಟಿಗೆ ಇದು ಖಾಸಗಿ ಜಮೀನು ಮತ್ತು ರೈತರ ಜಮೀನುಗಳಿಂದ ತೆಗೆದಿದ್ದು.

ಆ) ಹೌದು.

ಇ) ೧) ಕಳ್ಳ ಸಾಗಾಣಿಕೆಯ ತುರ್ತು ಸಂದೇಶವನ್ನು ತಿಳಿಸಲು ದೂರವಾಣಿ ಸಂಪರ್ಕ ಏರ್ಪಡಿಸಲಾಗಿದೆ.

೨) ಇಲಾಖಾ ಸಿಬ್ಬಂದಿಯನ್ನು ಶೀಘ್ರವಾಗಿ ಸಂಪರ್ಕಿಸಲು ನಿಸ್ತಂತು ಉಪಕರಣಗಳನ್ನು ಇಡೀ ರಾಜ್ಯಕ್ಕೆ ಹಬ್ಬುವ ಯೋಜನೆ ಸರ್ಕಾರಕ್ಕೆ ಇದೆ.

೩) ಕಳ್ಳ ಸಾಗಾಣಿಕೆಯನ್ನು ತಡೆಯಲು ಒಂದು ವಿಶೇಷ ಪೋಲೀಸ್ ದಳವನ್ನು ಡಿ.ಐ.ಜಿ. ಆಫ್ ಪೋಲೀಸ್ ಅವರ ನೇತೃತ್ವದಲ್ಲಿ ಸ್ಥಾಪಿಸಿದ್ದು ಅವರ ಸಿಬ್ಬಂದಿ ಈ ಪ್ರದೇಶದಲ್ಲಿ ವಿಶೇಷ ಕ್ರಮ ಕೈಗೊಳ್ಳುತ್ತಿದ್ದಾರೆ.

೪) ವಿಶೇಷವಾಗಿ ಕಳ್ಳ ಸಾಗಾಣಿಕೆಯಾಗುವ ಪ್ರದೇಶಗಳಲ್ಲಿನ ವಲಯ ಅರಣ್ಯಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸಲು ಯೋಚಿಸಲಾಗಿದೆ.

೫) ಅರಣ್ಯ ಸಿಬ್ಬಂದಿಗೆ ಬಂದೂಕುಗಳನ್ನು ಸರಬರಾಜು ಮಾಡಲಾಗಿದೆ. ಹಾಗೂ ಇವು ಗಳನ್ನು ಹೆಚ್ಚಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಶಿಕಾರಿಪುರ ತಾಲ್ಲೂಕಿನ ನೀರಾವರಿ ಯೋಜನೆಗಳ ಬಗ್ಗೆ

೧೪೬೧ (೩೦೪೭) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪ ಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಪುನರ್ ಆರಂಭವಾಗಬೇಕಾಗಿದ್ದ ''ಕಲ್ಲುವಡ್ಡಿನ'' ಯೋಜನೆ ಕಾರ್ಯವು ಈಗ ಯಾವ ಹಂತದಲ್ಲಿದೆ ?

ಆ) ಸನ್ಯಾಸಿಕೊಪ್ಪ (ಶಿಕಾರಿಪುರ ತಾಲ್ಲೂಕು) ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ ?

ಇ) ಕಳೆದ ೫ ವರ್ಷಗಳಿಂದೀಚೆಗೆ ಶಿಕಾರಿಪುರ ತಾಲ್ಲೂಕಿನಲ್ಲಿ ಯಾವುದಾದರೂ ಏತ ನೀರಾವರಿ ಯೋಜನೆ ಪ್ರಾರಂಭವಾಗಿದೆಯೇ ?